ನಿರುದ್ಯೋಗಿ ಶಿಕ್ಷಕರ ಸಮಸ್ಯೆ

365(643) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಎಸ್ಎಸ್ಎಲ್ಸಿ ಟಿ.ಸಿ.ಹೆಚ್. ತರಬೇತಿ ಪಡೆದು ಉಳಿದಿರುವ ನಿರುದ್ಯೋಗಿ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಮೇಲ್ಕಂಡ ನಿರುದ್ಯೋಗಿ ಶಿಕ್ಷಕರನ್ನು 1997ನೇ ಸಾಲಿನ ನೇಮಕಾತಿಯಲ್ಲಿ ನೇಮಕಾತಿ ಮಾಡಿಕೊಳ್ಳುವ ಸಾಧ್ಯತೆ ಇದೆಯೇ? ಹಾಗಿದ್ದಲ್ಲಿ ಇವರನ್ನು ಯಾವಾಗ ನೇಮಕ ಮಾಡಿಕೊಳ್ಳ ಲಾಗುವುದು?

ಶ್ರೀ ಹೆಚ್.ಜಿ.ಗೋವಿಂದಗೌಡ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.

ಅ) 1,22,341

ಆ) 1997ನೇ ಸಾಲಿನಲ್ಲಿ ಖಾಲಿಯಾಗುವ ಹಾಗೂ ಹೊಸದಾಗಿ ಮಂಜೂರಾಗುವ ಶಿಕ್ಷಕರ ಹುದ್ದೆಗಳಿಗೆ ಅಗತ್ಯವಿರುವಷ್ಟು ಶಿಕ್ಷಕರನ್ನು ಭರ್ತಿ ಮಾಡುವಾಗ ಇವರನ್ನು ಸಹ ಆಯ್ಕೆಗೆ ಪರಿಗಣಿಸಲಾಗುವುದು.

ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು

366 (43) ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳೆಷ್ಟು)ಜಿಲ್ಲಾವಾರು ಮಾಹಿತಿ ನೀಡುವುದು)

a) How many degree Colleges are there in the State; (furnish district wise information)

ಆ) ಈ ಪದವಿ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಯಾವ ಅನುಪಾತದಲ್ಲಿದೆ;

b) The ratio in respect of the No. of boys & Girls students studying in these degree Colleges.

ಇ) ಈ ವಿದ್ಯಾರ್ಥಿ ವಿದ್ಯಾರ್ಥಿನಿಯರ ಅನುಪಾತಗಳಲ್ಲಿ ಜಿಲ್ಲಾವಾರು ತಾರತಮ್ಯ ಏನಾದರೂ ಇದ್ದಲ್ಲಿ ಅದನ್ನು ಹೋಗಲಾಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

c) If there is any districtwise disparity in the ratio of Boys & Girls students, the steps initiated by Govt, for elimination

ಶ್ರೀ.ಬಿ. ಸೋಮಶೇಖರ್ ಉನ್ನತ ಶಿಕ್ಷಣ ಸಚಿವರು.

ಅ) ಒಟ್ಟು 149	ಜಿಲ್ಲೆ	ಕಾಲೇಜುಗಳ ಸಂಖ್ಯೆ	ಜಿಲ್ಲೆ	ಕಾಲೇಜುಗಳ ಸಂಖ್ಯೆ
	ಬೆಂಗಳೂರು ನಗರ	11	ದಕ್ಷಿಣಕನ್ನಡ	13
	ಬೆಂಗಳೂರು (ಗ್ರಾಂ)	07	ಕೊಡಗು	01
	ತುಮಕೂರು	10	ಧಾರವಾಡ	10
	ಕೋಲಾರ	11	ಉತ್ತರ ಕನ್ನಡ	04
	ಮೈಸೂರು	11	ಬೆಳಗಾಂ	03
	ಮಂಡ್ಯ	05	ಬಿಜಾಪುರ	02
	ಹಾಸನ	10	ಗುಲ್ಬರ್ಗಾ	10
	ಶಿವಮೊಗ್ಗ	11	ರಾಯಚೂರು	08
	ಚಿತ್ರದುರ್ಗ	09	ಬಳ್ಳಾರಿ	05
	ಚಿಕ್ಕಮಗಳೂರು	07	ಬೀದರ್	01

ಆ)	ಕೋರ್ಸು	ಒಟ್ಟು ವಿದ್ಯಾರ್ಥಿನಿಯರು	ಒಟ್ಟು	ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆಯಲ್ಲಿನ ಅನುಪಾತ
ಬಿ) ಬಿ.ಎ.	37,632	16,155		70:30
ಬಿ.ಕಾಂ.	5,583	4,178		57:43
ಬಿ.ಎಸ್ಸಿ.,	6,194	4,852		56:44
ಒಟ್ಟು	49,409	25,185		66:34

ಇ) ಅನುಪಾತ ತೀವ್ರವಾಗಿಲ್ಲದ ಕಾರಣ ಅನ್ವಯಿಸುವುದಿಲ್ಲ.

c) Not applicable, since the disparity in the ratio is not much.

ಅರಣ್ಯ ಭೂಮಿ ಒತ್ತುವರಿ ಮಾಡಿ ಕೃಷಿ ಮಾಡುತ್ತಿರುವ ರೈತರಿಗೆ ಪಟ್ಟ

367(640) ಶ್ರೀ ಡಿ.ಆರ್.ಪಾಟೀಲ್(ಗದಗ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಅರಣ್ಯ ಭೂಮಿ ಒತ್ತುವರಿ ಮಾಡಿ ಕೃಷಿ ಮಾಡುತ್ತಿರುವ ಎಲ್ಲ ಕೃಷಿಕರಿಗೆ ಪಟ್ಟಾ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು?